**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**

**ಚಿಂತಾಮಣಿ**

**ಸಿಸಿ ಸಂಖ್ಯೆ :128/2**024

ಚಾಸಾ: 01

ಪ್ರಾಸಾ: 01

ದಿನಾಂಕ 26.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಚಿಕ್ಕಯಲ್ಲಪ್ಪ |
| ತಂದೆಯ ಹೆಸರು | : | ವೆಂಕಟರವಣಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಮುಗಳಮರಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ಅಣ್ಣನ ಮಗ. ಆರೋಪಿಯನ್ನು ಅಪಘಾತ ದಿನ ನೋಡಿದ್ದೇನೆ. ಮೃತ ಮುನಿಲಕ್ಷ್ಮಮ್ಮ ನನ್ನ ಅತ್ತೆ. 28.06.2024 ರಂದು ನನ್ನ ಅತ್ತಿಗೆ ಮುನಿಲಕ್ಷ್ಮಮ್ಮ ಚಾಸಾ 2 ರವರ ಜೊತೆ ನಮ್ಮ ಊರಿಂದ ಇರಗಂಪಲ್ಲಿಗೆ ಪ್ಲಾಟಿನಮ್ ಕೆಂಪು ಬಣ್ಣದ ದ್ವಿಚಕ್ರವಾಹನದಲ್ಲಿ 11 ಗಂಟೆಗೆ ಹೋಗುತ್ತಿದ್ದು, 11.30 ರ ಸಮಯದಲ್ಲಿ ನಲ್ಲರಹಳ್ಳಿ ಮತ್ತು ಮಿಂಡಗಲ್ ಮಧ್ಯದಲ್ಲಿ ಎಸ್‌ಬಿ ಎಂ ಎಸ್ ಬಸ್ಸು ಅಪಘಾತ ಪಡಿಸಿದ್ದರಿಂದ ನನ್ನ ಅತ್ತಿಗೆ ಸ್ಥಳದಲ್ಲಿಯೇ ಮೃತ ಪಟ್ಟಿದಲ್ಲು ಆಕೆಯ ಶರೀರ ಎರಡು ಭಾಗ ಆಗಿದ್ದು, ಚಾಸಾ 2 ನನಗೆ ಕರೆ ಮಾಡಿ ವಿಚಾರ ತಿಳಿಸಿದ ಮೇರೆಗೆ ನಾನು ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಅತ್ತಿಗೆ ಮುನಿಲಕ್ಷ್ಮಮ್ಮ ಅಪಘಾತವಾಗಿ ಸ್ದಳದಲ್ಲಿ ಮೃತ ಪಟ್ಟಿದ್ದು ಕರಳು ಇಚೆ ಬಂದಿರುತ್ತದೆ. ಚಾಸಾ 2 ರವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ನಾನು ಕೂಡಲೇ ಆ್ಯಂಬುಲೆನ್ಸ ಬರಮಾಡಿ ಅವರನ್ನು ಕಳುಹಿಸಿಕೊಟ್ಟಿರುತ್ತೇನೆ. ತದನಂತರ ಈ ಬಗ್ಗೆ ನಾನು ಪಿರ್ಯಾದನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಕಡತದಲ್ಲಿರುವ ಪಿರ್ಯಾದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು

ಅಪಘಾತಗೊಂಡ ವಾಹನಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 2 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನ್ನ ದೂರಿನಲ್ಲಿ ಆರೋಪಿಯು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಂದು ಅಪಘಾತ ಪಡೆಸಿದ್ದಾನೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ಬಸ್ಸನ ಸಂಖ್ಯೆಃ ಕೆಎ 07 8607 ಎಸ್ ಬಿ ಎಂ ಎಸ್ ಆಗಿದ್ದು, ಅಪಘಾತವು ಬೆಳಿಗ್ಗೆ 11.45 ರಲ್ಲಿ ಜರುಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಆರ್ ಸಿ ಎಸ್ ವಕೀಲರಿಂದಃ</u>**

ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿದ್ದೇನೆ. ನನಗೆ ಬೆಳಿಗ್ಗೆ 11 ಗಂಟೆಗೆ ಫೋನ್ ಬಂದಿರುತ್ತದೆ. ಚಾಸಾ 2 ರವರ ದ್ವಿಚಕ್ರ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಹೋದಾಗ ಪೊಲೀಸರು ಇದ್ದರು. ಆರೋಪಿಯಾದ ಆ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಅಪಘಾತವಾದ ತಕ್ಷಣ ಹೊರಟುಹೋಗಿದ್ದು, ನಾನು ಅವರು ಪೊಲೀಸ್ ಠಾಣೆಯಲ್ಲಿ ನೋಡಿದ್ದು ಎಂದು ನುಡಿಯುತ್ತಾರೆ. ನಾನು ಎರಡು ದಿನಗಳ ನಂತರ ನೋಡಿರುತ್ತೇನೆ. ನನ್ನ ಚಿಕ್ಕಪ್ಪ ಪಿರ್ಯಾದನ್ನು ಕೊಟ್ಟಿರುತ್ತಾರೆ. ನಾನು ಪಿರ್ಯಾದಿನಲ್ಲಿ ತಿಳಿಸಿದಂತೆ ಯಾವುದೇ ಬಸ್ಸ ಡಿಕ್ಕಿ ಪಡೆಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಿರ್ಯಾದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಕೇಸು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**